RNU AIR DHARWAD

NOVEMBER 22, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- 'ವೆಸ್ಟರ್ನ್ ಘಾಟ್ಸ್ ಆನ್ ವ್ಹೀಲ್ಸ್' ಮತ್ತು 'ಪ್ರೊಜೆಕ್ಟ್ ಸಹ್ಯಾದ್ರಿ ಸಂವರ್ಧನ್'ಕ್ಕೆ ನಾಳೆ, ಬೆಂಗಳೂರಿನಲ್ಲಿ ಚಾಲನೆ.
- ವಿಕಸಿತ ಭಾರತ 2047 ಸಂಕಲ್ಪ; ಉದ್ಯಮ ನಾಯಕರಾಗಿ ಮಹಿಳೆಯರ ಕೊಡುಗೆ ಅಗತ್ಯ – ರಾಜ್ಯಪಾಲರು.
- ಮಧುಮೇಹ; ಹನ್ನೆರಡಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳು, ಜಾರಿಗೆ – ಡಾಕ್ಟರ್ ಜಿತೇಂದ್ರ ಸಿಂಗ್, ಹೇಳಿಕೆ.
- ರಾಜ್ಯದ ಕ್ರೀಡಾಪಟುಗಳಿಗೆ, ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ – ಡಾಕ್ಟರ್ ಕೆ.ಗೋವಿಂದರಾಜ, ಮಾಹಿತಿ.

<><><>

ಈಗ ವಾರ್ತೆಗಳ ವಿವರ

<><><>

ವೈಜ್ಞಾನಿಕ, ಪರಿಸರ ಪುನರುಜ್ಜೀವನ ಮತ್ತು ಪರಿಸರ ಸಾಕ್ಷರತೆ ಉಪಕ್ರಮವಾಗಿ, ರಾಜ್ಯ ಅರಣ್ಯ ಇಲಾಖೆ ಪಶ್ಚಿಮಘಟ್ಟ ಸಂರಕ್ಷಣಾ ಕಾರ್ಯಪಡೆ ಸಮಿತಿ ಸಹಯೋಗದಲ್ಲಿ, 'ವೆಸ್ಟರ್ನ್ ಘಾಟ್ಸ್ ಆನ್ ವ್ಹೀಲ್ಸ್' – ಸಂಚಾರಿ ಜೀವವೈವಿಧ್ಯ ವಸ್ತುಸಂಗ್ರಹಾಲಯ ಮತ್ತು 'ಪ್ರೊಜೆಕ್ಟ್ ಸಹ್ಯಾದ್ರಿ ಸಂವರ್ಧನ್ 20'26' ಜಾರಿಗೊಳಿಸಲಿದೆ. 'ವೆಸ್ಟರ್ನ್ ಘಾಟ್ಸ್ ಆನ್ ವ್ಹೀಲ್ಸ್', ರಾಜ್ಯದ ಎಲ್ಲ 31 ಜಿಲ್ಲೆಗಳ, ಶಾಲಾ ವಿದ್ಯಾರ್ಥಿಗಳಿಗೆ, ಸಹ್ಯಾದ್ರಿಯ ಜೀವವೈವಿಧ್ಯದ ಪರಿಚಯ ಮಾಡಿಸುವ, ವಿನೂತನ ಪ್ರಯತ್ನವಾಗಿದೆ. 15 ಮೀಟರ್ ಉದ್ದದ ಕಸ್ಟಮ್–ನಿರ್ಮಿತ, ವೋಲ್ವೋ ಮಲ್ಟಿ–ಆಕ್ಸಲ್ ಬಸ್‌ಅನ್ನು ಹವಾನಿಯಂತ್ರಿತ, ಸೌರಶಕ್ತಿ ಚಾಲಿತ ಸಂಚಾರಿ ಪರಿಸರ ವಸ್ತುಸಂಗ್ರಹಾಲಯವಾಗಿ ರೂಪಿಸಲಾಗಿದೆ. "ವಿಶ್ವದ ಅತಿದೊಡ್ಡ ಸಂಚಾರಿ ಜೀವವೈವಿಧ್ಯ ವಸ್ತುಸಂಗ್ರಹಾಲಯ" ಎಂಬ ಗಿನ್ನಿಸ್ ವಿಶ್ವ ದಾಖಲೆಯ ಪ್ರಯತ್ನಕ್ಕೆ ಇದು ಸಜ್ಜಾಗಿದೆ.

<><><>

ನಾಳೆ, ಸೋಮವಾರ, ಮಧ್ಯಾಹ್ನ 12:30ಕ್ಕೆ ಬೆಂಗಳೂರಿನ, ಮಲ್ಲೇಶ್ವರಂನ ಅರಣ್ಯ ಭವನದಲ್ಲಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ.ಪಿ. ರವಿ, ನೇತೃತ್ವದಲ್ಲಿ, 60 ಸಾವಿರ ಚದರ ಕಿಲೋಮೀಟರ್ ವ್ಯಾಪ್ತಿಯ, ಸಹ್ಯಾದ್ರಿ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವ, ಸಮಗ್ರ ನೀಲನಕ್ಷೆಯನ್ನು, ಗಣ್ಯರು ಅನಾವರಣಗೊಳಿಸಲಿದ್ದಾರೆ.

<><><>

ರಾಜ್ಯದ ಅರಣ್ಯ ಖಾತೆ ಸಚಿವ ರಾಮಲಿಂಗಾರೆಡ್ಡಿ, ಕಾರ್ಯಕ್ರಮದ ಅಧ್ಯಕ್ಷತೆ ವಸಲಿದ್ದು, ಭಾರತದ ಲೋಕಪಾಲ ನ್ಯಾಯಾಂಗ ಸದಸ್ಯ, ನ್ಯಾಯಮೂರ್ತಿ ಎಲ್. ನಾರಾಯಣಸ್ವಾಮಿ ಮುಖ್ಯ ಅತಿಥಿಗಳಾಗಿ, ಉಪಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ಮತ್ತು ಪಶ್ಚಿಮಘಟ್ಟ ಉನ್ನತ ಸಮಿತಿಯ ಅಧ್ಯಕ್ಷ, ನ್ಯಾಯಮೂರ್ತಿ ಜಾನ್ ಮೈಕೆಲ್ ಡಿ'ಕುನ್ಹಾ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ ಹಾಗೂ ನ್ಯಾ 'ನಲ್ ಇನೋವೇಶನ್ ಫೌಂಡೇಶನ್ – ಇಂಡಿಯಾ, ರಾಷ್ಟ್ರೀಯ ಸ್ಪರ್ಧೆಯಲ್ಲಿ, ಜಪಾನ್‌ನಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ಅಕುರಾ ವಿಜ್ಞಾನ ಸಮ್ಮೇಳನಕ್ಕೆ, ಮೈಸೂರಿನ ಇಸ್ಮಾಯಿಲ್ ದಸ್ತಗೀರ ಷರೀಫ್ ಆಯ್ಕೆಯಾಗಿದ್ದಾರೆ. ಏಣಿ ಸುರಕ್ಷತಾ ಸಹಕಾರಿ ವ್ಯವಸ್ಥೆ ರೂಪಿಸಿ, ಗಮನ ಸೆಳೆದಿರುವ ಇಸ್ಮಾಯಿಲ್ ಅವರು, ಪ್ರಸ್ತುತ, ಮೈಸೂರಿನ ಸಿ.ಟಿ.ಸಿ. ಪಾಲಿಟೆಕ್ನಿಕ್ ನಲ್ಲಿ, ಆರ್ಟಿಫೀಷಿಯಲ್ ಇಂಟಲಿಜೆನ್ಸ್ ಹಾಗೂ ಮಷೀನ್ ಲ್ಯಾಂಗ್ವೇಜ್ ಡಿಪ್ಲೊಮ ಅಭ್ಯಸಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಮಾದರಿ ಕುರಿತು, ಹಂಚಿಕೊಂಡಿದ್ದಾರೆ.

<><><>

ಇಸ್ಮಾಯಿಲ್ ಷರೀಫ್ ಧ್ವನಿ 60 ಸೆಕೆಂದುಗಳು

<><><>

ಭಾರತೀಯ ಮಹಿಳಾ ಉದ್ಯಮಿಗಳು, ಸಾಂಪ್ರದಾಯಿಕ ಕರಕುಶಲ ಕಲೆ ಮತ್ತು ಗುಡಿ ಕೈಗಾರಿಕೆಗಳಿಂದ ಹಿಡಿದು, ಜೈವಿಕ ತಂತ್ರಜ್ಞಾನ, ಔ 'ಧೋದ್ಯಮ, ಇ–ಕಾಮರ್ಸ್, ಫಿನ್‌ಟೆಕ್, ಕೃತಕ ಬುದ್ಧಿಮತ್ತೆ, ಬಾಹ್ಯಾಕಾಶ ವಿಜ್ಞಾನ ಹಾಗೂ ರಕ್ಷಣಾ ಕ್ಷೇತ್ರಗಳ ವರೆಗೆ, ತಮ್ಮ ವಿಶಿಷ್ಟ ಛಾಪು ಮೂಡಿಸಿದ್ದಾರೆ; ಕುಟುಂಬದ ಜವಾಬ್ದಾರಿ ನಿಭಾಯಿಸುತ್ತಲೇ, ವೃತ್ತಿ ಮತ್ತು ಉದ್ಯಮ ಕ್ಷೇತ್ರದಲ್ಲಿ, ಜಾಗತಿಕ ಸಾಧನೆ ಮಾಡುತ್ತಿದ್ದಾರೆ ಎಂದು, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ, ಶ್ಲಾಘಿಸಿದ್ದಾರೆ. ಬೆಂಗಳೂರಿನಲ್ಲಿ, ಫೆಡರೇ 'ನ್ ಆಫ್ ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರಿ, ಆಯೋಜಿಸಿದ್ದ, ಮಹಿಳಾ ಉದ್ಯಮಶೀಲತಾ ದಿನಾಚರಣೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಮಹಿಳೆಯರು, ಉದ್ಯೋಗದಾತರು, ನವೋದ್ಯಮಿಗಳು ಹಾಗೂ ಉದ್ಯಮ ನಾಯಕರಾಗಿ ಹೊರಹೊಮ್ಮುವುದು, 2047ರ ವಿಕಸಿತ ಭಾರತದ ಸಂಕಲ್ಪವನ್ನು ಸಾಕಾರಗೊಳಿಸಲು, ಭದ್ರ ಬುನಾದಿ ಎಂದರು.

<><><>

ಮಧುಮೇಹಕ್ಕೆ ಸಂಬಂಧಿಸಿದ, ಹನ್ನೆರಡಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳು, ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯಲ್ಲಿ, ಪ್ರಗತಿಯಲ್ಲಿವೆ ಎಂದು, ಕೇಂದ್ರ ಸಚಿವ ಡಾಕ್ಟರ್ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಇಂದು ಸಮಾರೋಪಗೊಳ್ಳಲಿರುವ, ನಾಲ್ಕು ದಿನಗಳ ಸಮ್ಮೇಳನದಲ್ಲಿ ಪಾಲ್ಗೊಂಡು, ಮಾತನಾಡಿದರು. ಆನ್ವಯಿಕ ಮತ್ತು ಅನುವಂಶಿಕ ಪರಿಹಾರಗಳ ಮೂಲಕ, ಮಧುಮೇಹವನ್ನು ಮುಂದಿನ ಪೀಳಿಗೆಯಲ್ಲಿ ತಡೆಗಟ್ಟುವ ಹಾಗೂ ನಿಯಂತ್ರಿಸುವ ನಿಟ್ಟಿನಲ್ಲಿ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಮಹತ್ವದ ಸಂಶೋಧನೆಗಳತ್ತ ಹೆಚ್ಚು ಗಮನಹರಿಸುತ್ತಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಬದಲಾವಣೆಗಾಗಿ ಜನರನ್ನು ಸಬಲಗೊಳಿಸುವುದು; ಮೀನುಗಾರಿಕೆ ಹಾಗೂ ಜಲಚರ ಸಾಕಣೆಯಲ್ಲಿ, ಯುವಜನತೆ ಮತ್ತು ಮಹಿಳೆಯರನ್ನು ಪ್ರೋತ್ಸಾಹಿಸುವುದು' ಎಂಬ ಧ್ಯೇಯದೊಂದಿಗೆ, ವಿಶ್ವ ಮೀನುಗಾರಿಕಾ ಪ್ರೋತ್ಸಾಹ ದಿನ ಆಚರಿಸಲಾಯಿತು. ನಸುಸ್ಥಿರ ಮೀನುಗಾರಿಕೆಯನ್ನು ಉತ್ತೇಜಿಸಿ, ಮೀನುಗಾರಿಕೆ ಸಮುದಾಯವನ್ನು ಪ್ರೋತ್ಸಾಹಿಸಲು, ಈ ದಿನ ಮೀಸಲಾಗಿತ್ತು. ಧಾರವಾಡದ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ, ಪ್ರಾಣಿಶಾಸ್ತ್ರ ಸ್ನಾತಕ ಅಧ್ಯಯನ ವಿಭಾಗದ, ಮೀನು ಕೃಷಿ ಬೋಧನಾ ಸಹಾಯಕ, ಡಾಕ್ಟರ್ ಸಮೀರ ಗೋಪಾಲ ಛಬ್ಬಿ, ಪ್ರದೇಶ ಸಮಾಚಾರಕ್ಕಾಗಿ, ಮೀನುಗಾರಿಕೆ ವೃತ್ತಿಯಲ್ಲಿರುವ ಅವಕಾಶಗಳ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಸಮೀರ್ ಗೋಪಾಲ ಛಬ್ಬಿ ಧ್ವನಿ 60ಸೆಕೆಂದುಗಳು

<><><>

ಕರ್ನಾಟಕದ ಕ್ರೀಡಾಪಟುಗಳಿಗೆ, ಸರ್ಕಾರಿ ಉದ್ಯೋಗಗಳಲ್ಲಿ ಶೇಕಡ 2 ರ ್ಟ, ಅರಣ್ಯ ಮತ್ತು ಪೊಲೀಸ್ ಇಲಾಖೆ ಹುದ್ದೆಗಳಲ್ಲಿ, ಶೇಕಡ 3 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ ಎಂದು, ರಾಜ್ಯ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಹಾಗೂ ವಿಧಾನಪರಿ 'ತ್ ಶಾಸಕ, ಡಾಕ್ಟರ್ ಕೆ.ಗೋವಿಂದರಾಜ, ತಿಳಿಸಿದ್ದಾರೆ. ಬೆಂಗಳೂರಿನ, ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ, 5ನೇ ಮಿನಿ ಕರ್ನಾಟಕ ಒಲಿಂಪಿಕ್ಸ್ ಸಮಾರೋಪದಲ್ಲಿ ಅವರು, ಮಾತನಾಡಿದರು. ಈಗಾಗಲೇ ರಾಜ್ಯದ 12 ಕ್ರೀಡಾಪಟುಗಳಿಗೆ, ಬಿ ವೃಂದದ ಹುದ್ದೆ ನೀಡಲಾಗಿದೆ. ಕ್ರೀಡಾಪಟುಗಳಿಗೆ ಶೇಕಡ 25 ರಷ್ಟು ಹಾಜರಾತಿ ವಿನಾಯಿತಿ, ಐದು ಅಂಕಗಳ ಗ್ರೇಸ್ ಮಾರ್ಕ್ಸ್ ಸದ್ಯದಲ್ಲೇ ಅನುಷ್ಟಾನಗೊಳ್ಳಲಿದೆ ಎಂದರು.

<><><>

ಸರ್ಕಾರಿ ವಿಶೇ ' ದತ್ತು ಸಂಸ್ಥೆಯಿಂದ, 9 ಮಕ್ಕಳು ಕಾನೂನುಬದ್ಧವಾಗಿ, ಪೋ 'ಕರ ಮಡಿಲು ಸೇರಿದ್ದಾರೆ ಎಂದು, ರಾಮನಗರ ಜಿಲ್ಲಾಧಿಕಾರಿ, ಯಶವಂತ ಗುರುಕರ ತಿಳಿಸಿದ್ದಾರೆ. ಭಾರತದಲ್ಲಿ, ಮಕ್ಕಳ ದತ್ತು ಸ್ವೀಕಾರ, ಬಾಲನ್ಯಾಯ ಮಕ್ಕಳ ಆರೈಕೆ ಮತ್ತು ರಕ್ಷಣೆ ಕಾಯ್ದೆ, 2015ರ ಅಡಿಯಲ್ಲಿ ನೋಂದಾಯಿಸಲ್ಪಡುತ್ತದೆ. ಮಗುವನ್ನು ದತ್ತು ಪಡೆಯಲು ಇಚ್ಛಿಸುವ, ಅರ್ಹ ದಂಪತಿಗಳು, ತಮ್ಮ ಮೂಲ ದಾಖಲಾತಿಗಳನ್ನು, cara.wcd.gov.in ಅಥವಾ SARA ಜಾಲತಾಣದ ಮೂಲಕ, ಅರ್ಜಿ ಸಲ್ಲಿಸಬಹುದು, ಎಂದರು.

<><><>

ದೇಶದ ಶ್ರೇ ್ಠ ಕಲಾವಿದ, ಎಸ್.ಎಮ್.ಪಂಡಿತ ಅವರು, ಕಲಬುರಗಿಯ ಕೀರ್ತಿ ಕಲಶ. ಅವರ ಕಲಾ ಪರಂಪರೆಯನ್ನು, ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ ಎಂದು, ವಿಕಾಸ ಅಕಾಡೆಮಿಯ ವಿಶ್ವಸ್ಥ ಬಸವರಾಜ ಪಾಟೀಲ್ ಸೇಡಂ, ಕರೆ ನೀಡಿದ್ದಾರೆ.

ಕಲಬುರಗಿಯ ಡಾಕ್ಟರ್ ಮಾನಯ್ಯ ಬಡಿಗೇರ, ಶಿಲ್ಪಕಲಾ ಗ್ಯಾಲರಿಯಲ್ಲಿ, ಶಿಲ್ಪ ಕಲಾವಿದ ಮಲ್ಲಿಕಾರ್ಜುನ ಚಿಕನಹಳ್ಳಿ ಅವರ, ಏಕವ್ಯಕ್ತಿ ಶಿಲ್ಪಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ, ಮಾತನಾಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ವೆಸ್ಟರ್ನ್ ಘಾಟ್ಸ್ ಆನ್ ವ್ಹೀಲ್ಸ್' ಮತ್ತು 'ಪ್ರೊಜೆಕ್ಟ್ ಸಹ್ಯಾದ್ರಿ ಸಂವರ್ಧನ್'ಕ್ಕೆ ನಾಳೆ, ಬೆಂಗಳೂರಿನಲ್ಲಿ ಚಾಲನೆ.
- ವಿಕಸಿತ ಭಾರತ 2047 ಸಂಕಲ್ಪ: ಉದ್ಯಮ ನಾಯಕರಾಗಿ ಮಹಿಳೆಯರ ಕೊಡುಗೆ ಅಗತ್ಯ – ರಾಜ್ಯಪಾಲರು.
- ಮಧುಮೇಹ: ಹನ್ನೆರಡಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳು, ಜಾರಿಗೆ – ಡಾಕ್ಟರ್ ಜಿತೇಂದ್ರ ಸಿಂಗ್, ಹೇಳಿಕೆ.
- ರಾಜ್ಯದ ಕ್ರೀಡಾಪಟುಗಳಿಗೆ, ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ – ಡಾಕ್ಟರ್ ಕೆ.ಗೋವಿಂದರಾಜ, ಮಾಹಿತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>